# ಕೋಪವೆಂಬ ರಕ್ಕಸ

ನಾನು ಚಿಕ್ಕವನಿದ್ದಾಗ ಹಿರಿಯರೊಬ್ಬರು ಯಾವುದೋ ಸಂದರ್ಭದಲ್ಲಿ ಹೇಳಿದ ಕಥೆಯೊಂದು ನೆನಪಾಗುತ್ತದೆ. ಒಬ್ಬಾನೊಬ್ಬ ಮಹನೀಯರಿದ್ದರು. ಅನೇಕ ವರ್ಷಗಳ ಕಾಲ ಹಿಮಾಲಯದಲ್ಲೋ, ಇನ್ನೆಲ್ಲೋ ತಪಸ್ಸು ಮಾಡಿ, ಇಂದ್ರಿಯಗಳ ಮೇಲೆ, ಮನಸ್ಸಿನ ಮೇಲೆ ತಾವು ಸಂಪೂರ್ಣ ಹತೋಟಿ ಸಾಧಿಸಿದ್ದೇವೆ ಎಂದು ದೃಢವಾಗಿ ನಂಬಿದ್ದರು. ತಮ್ಮನ್ನು ತಾವೇ 'ಅರಿಷಡ್ವರ್ಗ ನಿಗ್ರಹಾಚಾರ್ಯ' ಎಂದು ಕರೆದುಕೊಳ್ಳುತ್ತಿದ್ದರು. ಅರಿಷಡ್ವರ್ಗಗಳೆಂದರೆ ಮನುಷ್ಯನ ಶತ್ರುಗಳಾದ ಕಾಮ, ಕ್ರೋಧ, ಲೋಭ, ಮೋಹ, ಮದ ಮತ್ತು ಮಾತ್ಸರ್ಯ ಎಂಬ ಆರು ತಾಮಸ ಗುಣಗಳೆಂಬುದು ಎಲ್ಲರಿಗೂ ತಿಳಿದಿರುವ ಸಂಗತಿ. ಅವೆಲ್ಲವನ್ನೂ ತಾವು ಗೆದ್ದಿದ್ದೇವೆಂದು ಭಾವಿಸಿದ್ದ ಆ ಮಹನೀಯರಿಗೆ ಎಲ್ಲರೂ ತಮ್ಮನ್ನು ಗೌರವಿಸಬೇಕೆಂಬ ಒಳ ಬಯಕೆಯೊಂದು ಇದ್ದೇ ಇತ್ತು.

ಒಮ್ಮೆ ಅವರ ಬಳಿ ಒಬ್ಬಾತ ಬಂದ. ತುಂಬಾ ವಿನಯಶೀಲನಂತೆ ಕಾಣಿಸುತ್ತಿದ್ದ. ಆ ತಪಸ್ವಿಗಳಿಗೆ ನಮಸ್ಕರಿಸಿ, 'ಸ್ವಾಮಿ, ತಾವು ಕಾಮ ಕ್ರೋಧಾದಿಗಳನ್ನು ಸಂಪೂರ್ಣವಾಗಿ ಗೆದ್ದಿದ್ದೀರಿ ಎಂದು ಜನ ಮಾತಾಡಿಕೊಳ್ಳುತ್ತಾರೆ. ಆದ್ದರಿಂದಲೇ ನಿಮ್ಮ ಬಗೆಗೆ ನಮಗೆಲ್ಲರಿಗೂ ಪೂಜ್ಯಭಾವವಿದೆ... ತಾವು ಖಂಡಿತವಾಗಿಯೂ ಅವನ್ನು ಜಯಸಿದ್ದೀರಾ?...' ಎಂದು ನಮ್ರತೆಯಿಂದ ಕೇಳಿದ. 'ಹೌದಪ್ಪಾ... ಎಲ್ಲ ವಿಕಾರಗಳನ್ನೂ ಗೆದ್ದಿದ್ದೇನೆ' ಎಂದರು ಅವರು. ಈ ಮನುಷ್ಯ ಅಷ್ಟಕ್ಕೇ ತೃಪ್ತನಾಗಲಿಲ್ಲ. 'ನಿಜಕ್ಕೂ...? ಅದ್ಭುತ...! ಇನ್ನೊಮ್ಮೆ ಹೇಳುವಿರಾ...? ಕೇಳಿ ಸಂತೋಷಪಡುತ್ತೇನೆ' ಎಂದ. 'ಓಹೋ! ಖಂಡಿತ ಹೇಳುತ್ತೇನೆ. ನನಗೆ ಯಾವ ಹಿಂಜರಿಕೆಯೂ ಇಲ್ಲ' ಎಂದರು ಷಡ್ವರ್ಗ ನಿಗ್ರಹಾಚಾರ್ಯರು. ಈ ಕಿಲಾಡಿ ಮನುಷ್ಯ– 'ಯಾಕೋ ನಿಮ್ಮ ಧ್ವನಿ ದೃಢವಾಗಿಲ್ಲ... ಏನೋ ಅಳುಕು ಕಾಣಿಸುತ್ತಿದೆ... ಇನ್ನೊಮ್ಮೆ ದಯವಿಟ್ಟು ಹೇಳುತ್ತೀರಾ?' ಎಂದ. ತಪಸ್ವಿಗಳಿಗೆ ರೇಗಿಹೋಯಿತು. ಯಾವನೋ ಕಿಡಿಗೇಡಿ ನಮ್ಮನ್ನು ಪರೀಕ್ಷೆ ಮಾಡಲು ಬಂದಿದ್ದಾನೆ' ಎನ್ನಿಸಿ, ಅವರ ಕಣ್ಣು ಕೆಂಪಾಯಿತು. 'ಹೋಗಯ್ಯಾ ಹೋಗು, ಶುದ್ಧ ತಲೆ ಹರಟೆ. ನಮಗೆ ಬೇರೇನೂ ಕೆಲಸವಿಲ್ಲ ಎಂದು ಕೊಂಡೆಯಾ?' ಎಂದರು ಗಡಸು ದನಿಯಲ್ಲಿ. ಬಂದಿದ್ದಾತ– 'ಈಗ ಸತ್ಯ ಹೊರಬಂತು. ನೀವು ಅರಿಷಡ್ವರ್ಗಗಳಲ್ಲಿ ಒಂದಾಗಿರುವ ಕ್ರೋಧವನ್ನೇ ಗೆದ್ದಿಲ್ಲ ಎಂಬುದು ಖಚಿತವಾಯಿತು... ಇನ್ನೊಮ್ಮೆ ಬರುತ್ತೇನೆ... ಉಳಿದವುಗಳ ಬಗ್ಗೆ ವಿಚಾರಿಸಿಕೊಳ್ಳಲು' ಎಂದು ಹೊರಟು ಹೋದ.

ಈ ಕಥೆಯ ಒಡಲಲ್ಲಿ ಒಂದು ಸತ್ಯವಿದೆ. ನಾವು ಎಷ್ಟೇ ಪ್ರಯತ್ನಿಸಿದರೂ ನಮ್ಮಲ್ಲಿರುವ ವಿಕಾರಗಳು ಸಂಪೂರ್ಣವಾಗಿ ನಾಮಾವಶೇಷವಾಗಿರುವುದಿಲ್ಲ, ನಾವು ಅವನ್ನು ನಿಗ್ರಹಿಸಿದ್ದೇವೆಂದು ಭಾವಿಸಿದ್ದರೂ, ಯಾವುದೋ ಒಂದು ದುರ್ಬಲ ಕ್ಷಣದಲ್ಲಿ ಅವು ಪ್ರತ್ಯಕ್ಷವಾಗಿ, ನಮ್ಮನ್ನು ದಿಗ್ಭ್ರಮೆಗೊಳಿಸುತ್ತವೆ. ಅವು ಕಾಣಿಸಿಕೊಳ್ಳದಂತೆ ಅಥವಾ ನಮ್ಮ ಹತೋಟಿ ಮೀರದಂತೆ ನೋಡಿಕೊಳ್ಳಬೇಕಾದರೆ ನಿರಂತರ ಎಚ್ಚರದಿಂದಿರುವುದೊಂದೇ ಮಾರ್ಗ. ಮನುಷ್ಯನನ್ನು ಕಂಗೆಡಿಸುವ ದೌರ್ಬಲ್ಯಗಳಲ್ಲಿ ಕಾಮ ಹಾಗೂ ಕ್ರೋಧ–ಇವೆರಡೂ ಮುಂಚೂಣಿಯಲ್ಲಿರುವಂಥವು. ಇವೆರಡೂ ಪರಸ್ಪರ ಪೋಷಕವೆನ್ನಬಹುದಾದ ವಿಕಾರಗಳು, ಉದಾಹರಣೆಗೆ ಅಹಲ್ಯೆಯ ಪ್ರಕರಣವನ್ನೇ ನೋಡಬಹುದು, ಮಹಾತಪಸ್ವಿಯಾಗಿದ್ದ ಗೌತಮರ ಪತ್ನಿ ಅಹಲ್ಯೆ ತಾನು ಅತ್ಯಂತ ಪರಿಶುದ್ಧಳೆಂದು ಭಾವಿಸಿದ್ದಳು. ಆದರೆ ದೇವರಾಜನಾದ ಇಂದ್ರನ ವೈಭವ ಅವಳ ಮನಸ್ಸನ್ನು ಸೆಳೆಯಿತು. ತನ್ನ ತಾಪಸ ಜೀವನದ ರಿಕ್ತ ಸ್ಥಿತಿಗೆ ಬೇಸರಿಸುವಂತಾಯಿತು, ಬಯಕೆಯ ಪಿಶಾಚಿ ಆಕೆಯನ್ನು ಬಲಿ ತೆಗೆದುಕೊಂಡಿತು. ಗೌತಮನ ಕ್ರೋಧಕ್ಕೆ ಇದು ಕಾರಣವಾಯಿತು. ಕ್ರೋಧವೆಂಬುದು ತನ್ನೊಂದಿಗೆ ಅನರ್ಥ ಪರಂಪರೆಯನ್ನೇ ಹೊತ್ತು ತರುವಂಥದು 'ಕೋಪವೆಂಬುದನರ್ಥ ಸಾಧನ, ಕೋಪವೇ ಸಂಸಾರ ಬಂಧನ...' ಇತ್ಯಾದಿ ಮಾತುಗಳಲ್ಲಿ ಕೋಪದ ಪರಿಣಾಮಗಳನ್ನು ಮಹಾಜ್ಞಾನಿ ವಿದುರ ಪಟ್ಟಿಮಾಡಿದ್ದಾನೆ. ಅಸಮಾಧಾನ, ಅತೃಪ್ತಿ, ಅಸಹನೆ, ಅನಾರೋಗ್ಯಕರ ಸ್ಪರ್ಧಾ ಪ್ರವೃತ್ತಿ, ಅಸೂಯೆ. ಈ ಎಲ್ಲವೂ ಕೋಪಕ್ಕೆ ಕಾರಣವಾಗುವಂಥ ಮೂಲ ಪರಿಕರಗಳು, ಸೌಮ್ಯ ರೂಪದಲ್ಲಿ ಪ್ರಕಟವಾಗುವ ಕೋಪವೂ ಶಮನಗೊಳ್ಳದಿದ್ದಾಗ ಉಗ್ರರೂಪದ ಕ್ರೋಧವಾಗಿ ಅನರ್ಥಕ್ಕೆ ಕಾರಣವಾಗುತ್ತದೆ. ಹತಾಶೆ, ಅಪಮಾನ, ಸೋಲು ಈ ಎಲ್ಲವೂ ಕೋಪ ಪೋಷಕಗಳೇ, ಅಪಮಾನಿತಳಾದ ದ್ರೌಪದಿಯ ಕ್ರೋಧ ಕುರುಕ್ಷೇತ್ರದಲ್ಲಾದ ಮಹಾದುರಂತಕ್ಕೆ ದಾರಿ ಮಾಡಿಕೊಟ್ಟಿತಲ್ಲವೆ?

ಆದ್ದರಿಂದಲೇ ಗೀತೆ ಹೇಳುತ್ತದೆ– 'ನಿರಂತರ ಎಚ್ಚರದಲ್ಲಿರು, ರಾಗ ದ್ವೇಷಗಳ ಮೇಲೆ ಹತೋಟಿ ಸಾಧಿಸು, ಅಂತಃಕರಣವನ್ನು ಪ್ರಸನ್ನವಾಗಿರಿಸಿಕೋ' ಎಂದು. ಕೋಪವೆಂಬ ರಕ್ಕಸನನ್ನು ಮಣಿಸುವ ಉಪಾಯ ಇದೊಂದೇ!

■ ವೈನತೇಯ

# ಮಾತೇ ಮುತ್ತು

★ ಶ್ರೀಮಂತಿಕೆಯನ್ನು ಪ್ರದರ್ಶಿಸದಿರಬಹುದು; ಬಡತನವನ್ನು ಬಚ್ಚಿಡಲಾರೆವು.

-ಫಿನ್‌ಲ್ಯಾಂಡ್ ಗಾದೆ

★ ಬಡತನ ನಾಚಿಕೆಯ ವಿಷಯ ಅಲ್ಲ. ಆದರೆ ಯಾರೂ ಅದಕ್ಕೆ ಬಹುಮಾನ ಕೊಡುವುದಿಲ್ಲ.

-ರಷ್ಯಾ ಗಾದೆ

★ ವಿದ್ಯೆಯೆಂಬುದು ಮನುಷ್ಯನ ಅತ್ಯಧಿಕವಾದ ಸೌಂದರ್ಯ; ಮನುಷ್ಯನ ಪಾಲಿಗೆ ಹುದುಗಿಟ್ಟ ದ್ರವ್ಯ.

-ಪುಟ್ಟರಾಜ ಗವಾಯಿ

★ ತತ್ವಪದ ಗಾಯನ ಎಂಬುದು ಬೆಂಕಿಯನ್ನು ಕೈಯಲ್ಲಿ ಹಿಡಿಯುವ ಸಾಹಸವಿದ್ದಂತೆ.

-ತಂಬೂರಿ ಜವರಯ್ಯ

★ ಪ್ರೇಮಕ್ಕೆ ತಾಳ್ಮೆ ಇದೆ. ದಯೆ ಇದೆ. ಅಸೂಯೆ ಇಲ್ಲ. ಹೆಮ್ಮೆ ಇಲ್ಲ. ಪ್ರೇಮ ತಪ್ಪುಗಳ ಲೆಕ್ಕ ಇಡುವುದಿಲ್ಲ. ಎಂದೂ ಸೋಲುವುದಿಲ್ಲ. ಆಶಾವಾದ ಬಿಡುವುದಿಲ್ಲ. ಪ್ರೇಮ ಅಮರ.

-ವಾಲಿ ಅಮೋಸ್

★ ಬದುಕಿನ ಮೂರು ಮಹಾ ಶತ್ರುಗಳೆಂದರೆ ಅವಿದ್ಯೆ, ಅನಾರೋಗ್ಯ ಮತ್ತು ದಾರಿದ್ರ್ಯ. ಮನುಷ್ಯನ ಎಲ್ಲ ಪ್ರಯತ್ನಗಳೂ ಈ ಮೂರನ್ನು ಪರಿಹರಿಸಿಕೊಳ್ಳುವುದರ ಕಡೆಗೇ.

-ಹಾ.ಮಾ.ನಾಯಕ

★ ಶಿಲಾಶಾಸನವನ್ನೂ ಅಳಿಸಿ ಹಾಕಬಹುದು; ಆದರೆ ಜೀವನದಲ್ಲಿ ಮುಂದಿಟ್ಟ ಹೆಜ್ಜೆಯನ್ನು ಹಿಂದಿಡುವುದು ಸಾಧ್ಯವಿಲ್ಲ ಎಂಬ ಪಾಠವನ್ನು ಬದುಕು ನಮಗೆ ಕಲಿಸಿತು.

-ತರಾಸು

★ ವ್ಯಕ್ತಿಗಳ ಕೂಟ ಸಮಾಜವಾಗುತ್ತದೆ ಎಂದು ಹೇಳುವುದು ಕ್ಷುಲ್ಲಕವಾದುದು, ಸಮಾಜವು ಯಾವಾಗಲೂ ಬಡವ ಶ್ರೀಮಂತ ಎಂಬ ವರ್ಗಗಳಿಂದ ಕೂಡಿದ್ದಾಗಿದೆ.

-ಬಿ.ಆರ್.ಅಂಬೇಡ್ಕರ್

★ ಬರೀ ಬುದ್ಧಿವಂತರಿಂದಲೇ ತುಂಬಿದ ದೇಶ ಬಹುಬೇಗ ನಾಶವಾಗುತ್ತದೆ!

-ಶೇಣಿ ಗೋಪಾಲಕೃಷ್ಣ ಭಟ್ಟ

★ ಬದುಕು ವಿಚಿತ್ರವಾದದ್ದು. ಇಲ್ಲಿ ಸ್ನೇಹಕ್ಕೆ ನೂರಾರು ಕಾರಣಗಳಿರುವಂತೆಯೇ ದ್ವೇಷಕ್ಕೆ ಹಲವಾರು ಕಾರಣಗಳಿರುತ್ತವೆ; ಸಂಬಂಧ ಚಿರಂತನವಾದದ್ದು ಎಂದು ಹೊರಡುವುದೇ ತಪ್ಪು.

-ಪಿ.ಲಂಕೇಶ್

★ ಸನ್ಮಾನ, ಬಿರುದುಗಳು ಸಾಮಾನ್ಯರನ್ನು 'ಎತ್ತಿ ತೋರಿಸುತ್ತವೆ'; ಅಸಾಮಾನ್ಯರಿಗೆ ಮುಜುಗರ ಉಂಟು ಮಾಡುತ್ತವೆ; ಅಯೋಗ್ಯರಿಂದ ಗೌರವ ಕಳೆದುಕೊಳ್ಳುತ್ತವೆ.

-ಜಾರ್ಜ್ ಬರ್ನಾರ್ಡ್ ಶಾ

★ ಜೀವಂತ ಭಾಷೆ ಶಕ್ತಿಯುತವಾದದ್ದು. ಸತತ ಬದಲಾವಣೆಗೆ ಗುರಿಯಾದದ್ದು. ಅದು ಜನತೆಯ ಪ್ರತಿಬಿಂಬ. ಅದರ ಬೇರು ಜನತೆಯಲ್ಲಿ; ಹೂವು ಹಣ್ಣು ಸುಸಂಸ್ಕೃತರಲ್ಲಿ.

-ಜವಾಹರಲಾಲ ನೆಹರು

★ ಮಕ್ಕಳಿರುವವರಿಗೆ ದುಡಿಮೆ ಹಿತಕರವಾಗಿರುತ್ತದೆ; ಆದರೆ ದುರದೃಷ್ಟ ಬಂದೊದಗಿದಾಗ ಅದು ಮತ್ತಷ್ಟು ದುರ್ಭರವಾಗುತ್ತದೆ.

-ಫ್ರಾನ್ಸಿಸ್ ಬೇಕನ್